6

# ದಶಾಜ್ಞೆಗಳು

1. ನಾನಲ್ಲದೆ ನಿನಗೆ ಬೇರೆ ದೇವರುಗಳು ಇರಬಾರದು.
2. ಯಾವ ಮೂರ್ತಿಯನ್ನೂ ಮಾಡಿಕೊಳ್ಳಬಾರದು, ...
3. ನಿನ್ನ ದೇವರಾದ ಯೆಹೋವನ ಹೆಸರನ್ನು ಅಯೋಗ್ಯ ಕಾರ್ಯಕ್ಕಾಗಿ ಎತ್ತಬಾರದು, ...
4. ಸಬ್ಬತ್ ದಿನವನ್ನು ದೇವರ ದಿನವೆಂದು ಆಚರಣೆಗೆ ತರುವದಕ್ಕೆ ಜ್ಞಾಪಕದಲ್ಲಿಟ್ಟು ಕೊಳ್ಳಬೇಕು, ...
5. ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು, ...
6. ನರಹತ್ಯ ಮಾಡಬಾರದು.
7. ವ್ಯಭಿಚಾರ ಮಾಡಬಾರದು.
8. ಕದಿಯಬಾರದು.
9. ಮತ್ತೊಬ್ಬನ ಮೇಲೆ ಸುಳ್ಳು ಸಾಕ್ಷಿ ಹೇಳಬಾರದು.
10. ಆಶಿಸಬಾರದು, ...

ವಿಮೋಚನಕಾಂಡ 20:1-17

ಇಸ್ರಾಯೇಲ ಜನಾಂಗಕ್ಕೆ ದೇವರು ಕೊಟ್ಟ ಧರ್ಮಶಾಸ್ತ್ರವು (ಧರ್ಮೋಪದೇಶಕಾಂಡ 4:7, 8) "ಆಜ್ಞೆಗಳು," "ಶಾಸನಗಳನ್ನು," "ಪ್ರಮಾಣಗಳನ್ನು," "ಕಟ್ಟಳೆಗಳನ್ನು," "ನಿಬಂಧನೆಗಳನ್ನು," "ನೀತಿ ವಿಧಿಗಳನ್ನು," "ಒಡಂಬಡಿಕೆಯ ಹೃದಯವಾದ ದಶಾಜ್ಞೆಗಳನ್ನು" ಒಳಗೊಂಡಿತ್ತು. "Law" ಎಂಬ ಮಾತು ದಶಾಜ್ಞೆಗಳನ್ನೊಳಗೊಂಡು ದೇವರ ಆಜ್ಞೆಗಳಲ್ಲಿ ಯಾವುದನ್ನೇ ಉಲ್ಲೇಖಿಸಿದರು ಉಪಯೋಗಿಸಲ್ಪಟ್ಟಿತು. ಇದರ ಒಳ್ಳೇ ಸೂಚನೆಯು ಕೀರ್ತನೆ 119ರಲ್ಲಿ ಕಂಡುಬರುತ್ತದೆ, ದಾವೀದನು ಈ ಕೀರ್ತನೆಯಲ್ಲಿ ಒಡಂಬಡಿಕೆಯನ್ನು ಇಲ್ಲವೇ ದಶಾಜ್ಞೆಗಳನ್ನು ನಮೂದಿಸದಿದ್ದರೂ ಅವುಗಳನ್ನು ಈ ಪದಗಳಲ್ಲಿ ಕೂಡಿಸಿಕೊಂಡಿದ್ದಾನೆ: "ಧರ್ಮಶಾಸ್ತ್ರ" (ವಚನ 1), "ಕಟ್ಟಳೆಗಳು" (ವಚನ 2), "ನೇಮಗಳು" (ವಚನ 4), "ನಿಬಂಧನೆಗಳು" (ವಚನ 5), "ಆಜ್ಞೆಗಳು" (ವಚನ 6), "ನೀತಿವಿಧಿಗಳು," (ವಚನ 7) ಮತ್ತು "ನಿಬಂಧನೆಗಳು" (ವಚನ 16). (ಬಾಷಾಂತರಗಳು ಭಿನ್ನವಾಗಿರಬಹುದು.)

ಇಸ್ರಾಯೇಲ್ಯರಿಗೆ ದೇವರು ಕೊಟ್ಟ ಧರ್ಮಶಾಸ್ತ್ರವು ದಶಾಜ್ಞೆಗಳನ್ನು ಒಳಗೊಂಡಿತ್ತು. ಅವು ಹೀಗೆ ಕೊಡಲ್ಪಟ್ಟವು ಎಂಬ ವೃತ್ತಾಂತದ ಮೊದಲು (ಧರ್ಮೋಪದೇಶಕಾಂಡ 5:6-21) ಈ ಹೇಳಿಕೆ ಕಂಡು ಬರುತ್ತದೆ: "ಮೋಶೆ ಇಸ್ರಾಯೇಲ್ಯರಿಗೆ ಕೊಟ್ಟ ಧರ್ಮಶಾಸ್ತ್ರವು ಇದೇ. ಇಸ್ರಾಯೇಲ್ಯರು ಐಗುಪ್ತ ದೇಶದಿಂದ ಬಂದಾಗ. ... ಮೋಶೆ ಇಸ್ರಾಯೇಲ್ಯರಿಗೆ ತಿಳಿಸಿದ ಆಜ್ಞಾ ವಿಧಿನಿರ್ಣಯಗಳು ಇವೇ" (ಧರ್ಮೋಪದೇಶಕಾಂಡ 4:44-46).

ಧರ್ಮಶಾಸ್ತ್ರದ ಕೊಡುವಿಕೆಗೆ ಪೀಠಿಕೆಯಾಗಿ ಹೇಳಿದ, ಧರ್ಮೋಪದೇಶಕಾಂಡ 5:1ಬಿ, 2ರಲ್ಲಿಯ ಮೋಶೆಯ ಹೇಳಿಕೆಯು, ದಶಾಜ್ಞೆಗಳನ್ನು "ನಿಬಂಧನೆ"ಗಳಂತೆ

ಮತ್ತು "ಆಜ್ಞಾವಿಧಿ"ಗಳಂತೆ ತಿಳಿಯಲ್ಪಡಬೇಕೆಂದು ಸೂಚಿಸುತ್ತದೆ: "ಇಸ್ರಾಯೇಲ್ಯರೇ, ನಾನು ಈಗ ನಿಮಗೆ ತಿಳಿಸುವ ಆಜ್ಞಾವಿಧಿಗಳನ್ನು ಕೇಳಿರಿ; ಇವುಗಳನ್ನು ಗ್ರಹಿಸಿಕೊಂಡು ಅನುಸರಿಸಿ ನಡೆಯಬೇಕು. ನಮ್ಮ ದೇವರಾದ ಯೆಹೋವನು ಹೋರೇಬಿನಲ್ಲಿ ನಮ್ಮ ಸಂಗಡ ನಿಬಂಧನೆಯನ್ನು ಮಾಡಿದನು."

ಇಸ್ರಾಯೇಲ್ಯರ ಚಟುವಟಿಕೆಗಳನ್ನು ನಿಯಂತ್ರಿಸಲು ಅವರ ಜನಾಂಗದ ಅವಶ್ಯತೆಗಳಲ್ಲಿ ತಲುಪಿದ ಆಜ್ಞೆಗಳಿಂದ ಒಡಂಬಡಿಕೆಯು ತಾನೇ ಮಾಡಲ್ಪಟ್ಟಿತ್ತು. ಧರ್ಮಶಾಸ್ತ್ರದ ಸ್ವಭಾವವು ಎರಡನೆಯ ಆಜ್ಞೆಯಲ್ಲಿ ತೋರಿಸಲ್ಪಟ್ಟಿದೆ, ಅದರಲ್ಲಿ ದೇವರು, "ನನ್ನನ್ನು ಪ್ರೀತಿಸಿ ನನ್ನ ಆಜ್ಞೆಗಳನ್ನು ಕೈಕೊಳ್ಳುವವರಿಗೋ ಸಾವಿರ ತಲೆಗಳವರೆಗೆ ದಯೆ ತೋರಿಸುವವನಾಗಿಯೂ ಇದ್ದೇನೆ" ಎಂದು ವಾಗ್ದಾನ ಮಾಡಿದ್ದಾನೆ (ಧರ್ಮೋಪದೇಶಕಾಂಡ 5:10).

ದಶಾಜ್ಞೆಗಳು ದೇವರು ತನ್ನನ್ನು ಇಸ್ರಾಯೇಲಿಗೆ ಬಂಧಿಸಿಕೊಂಡ ಮೂಲ ದಾಖಲೆಯನ್ನು ಒಳಗೊಂಡಿರುತ್ತವೆ. ಹತ್ತು ಆಜ್ಞೆಗಳಲ್ಲಿ ಎಂಟು ಆಜ್ಞೆಗಳು ರೂಪದಲ್ಲಿ ನಕಾರಾತ್ಮಕವಾದವುಗಳು ಆಗಿರುತ್ತವೆ. "ನೀನು ಮಾಡಬಾರದು" ಎಂಬ ಮಾತುಗಳನ್ನು ಉಪಯೋಗಿಸಿವೆ. ನಾಲ್ಕನೆಯ ಮತ್ತು ಐದನೆಯವುಗಳು ಮಾತ್ರ ಸಕಾರಾತ್ಮಕ ಹೇಳಿಕೆಗಳಾಗಿವೆ: "ಸಬ್ಬತ್ ದಿನವನ್ನು ಆಚರಿಸು" ಮತ್ತು "ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸು." ಅವುಗಳ ಪ್ರಮಾಣಗಳನ್ನು ಸಂಪೂರ್ಣವಾಗಿ ನಿರೂಪಿಸದೇ ಇಲ್ಲವೇ ಅವುಗಳನ್ನು ಹೇಗೆ ಕಾರ್ಯರೂಪಕ್ಕೆ ತರಬೇಕೆಂಬುದನ್ನು ವಿಸ್ತರಿಸಿ ಹೇಳದೇ ಎಲ್ಲಾ ಹತ್ತೂ ಆಜ್ಞೆಗಳು ಸಂಕ್ಷೇಪವಾಗಿ ಸರಳವಾಗಿ ಹೇಳಲ್ಪಟ್ಟಿವೆ.

ಹೀಗೆ ಒಡಂಬಡಿಕೆಯನ್ನು ಕಾರ್ಯರೂಪಕ್ಕೆ ತರುವದನ್ನು ಕುರಿತು ಪ್ರಶ್ನೆಗಳು ಏಳುವುದು ನಿಶ್ಚಿತವಾಗಿದೆ: "ಪ್ರತಿಯೊಂದು ಆಜ್ಞೆಯಲ್ಲಿ ಏನು ಒಳಗೊಂಡಿದೆ?"; "ಯಾವ ಕೃತ್ಯಗಳು ಆಜ್ಞೆಗಳನ್ನು ಮೀರುತ್ತವೆ?"; "ಆಜ್ಞೆಯು ಮೀರಲ್ಪಟ್ಟಿದೆ ಎಂಬುದನ್ನು ನಾವು ಹೇಗೆ ನಿರ್ಣಯಿಸಿಕೊಳ್ಳಬೇಕು?"; "ಆಜ್ಞೆಗಳನ್ನು ಮುರಿಯುವ ವ್ಯಕ್ತಿಯು ಹೇಗೆ ಶಿಕ್ಷಿಸಲ್ಪಡಬೇಕು?" ಇಂಥ ಪ್ರಶ್ನೆಗಳನ್ನು ಎದುರಿಸಬೇಕಾಗುತ್ತದೆ. ಆಜ್ಞೆಗಳು, ಪ್ರಮಾಣಗಳು, ನಿಬಂಧನೆಗಳು, ನೀತಿವಿಧಿಗಳು ಈ ಉದ್ದೇಶಕ್ಕಾಗಿ ಅಸ್ತಿತ್ವದಲ್ಲಿದ್ದವು (ನೋಡಿರಿ ಧರ್ಮೋಪದೇಶಕಾಂಡ 4:14). ಈ ನಿಬಂಧನೆಗಳು, ನೀತಿವಿಧಿಗಳನ್ನು ಇಲ್ಲವೇ ಒಡಂಬಡಿಕೆಯು, ಅವುಗಳನ್ನು ಹೇಗೆ ಜಾರಿಗೊಳಿಸಬೇಕೆಂದು ಯೋಗ್ಯ ಮಾಹಿತಿಯಿಲ್ಲದ ನಿಯಮಗಳ ಒಂದು ಬಲಹೀನ ಸಂಗ್ರಹವಾಗಿರುತ್ತಿತ್ತು. ಈ ವಿಸ್ತರಿಸಲ್ಪಟ್ಟ ಹೇಳಿಕೆಗಳನ್ನು ಯಾವುದೇ ರೀತಿಯಲ್ಲಿ ಮೀರುವುದು ಒಡಂಬಡಿಕೆಯನ್ನು ಮೀರುವದಕ್ಕೆ ಸಮನಾಗಿದೆ, ಯಾಕಂದರೆ ಕೂಡಿಸಲ್ಪಟ್ಟ ಈ ನಿರ್ದೇಶನಗಳು ದಶಾಜ್ಞೆಗಳ ಪ್ರಮಾಣಗಳನ್ನು ತಿಳಿಯಲು ಇಸ್ರಾಯೇಲ್ಯರಿಗೆ ಸಹಾಯಕವಾಗಿ ಕೊಡಲ್ಪಟ್ಟವೆ.

ಹೆಚ್ಚಾದ ಆಜ್ಞೆಗಳನ್ನು ಮೀರುವುದಕ್ಕೆ ಮರಣ ಶಿಕ್ಷೆಯಿತ್ತು. ಕದಿಯುವುದು, ಸುಳ್ಳು ಹೇಳುವುದು ಮತ್ತು ಆಶಿಸುವುದು ಹೊರತು ಪಡಿಸಲ್ಪಟ್ಟಿವೆ, ಕದಿಯುವುದು ಒಬ್ಬ ವ್ಯಕ್ತಿಯನ್ನು ಕದಿಯುವದನ್ನು (kidnaping) ಒಳಗೊಂಡಿದ್ದರೆ ಮರಣದಂಡನೆಯಾಗುತ್ತದೆ (ವಿಮೋಚನಕಾಂಡ 21:16; ಧರ್ಮೋಪದೇಶಕಾಂಡ 24:7). ಹಾಗೆಯೇ, ಇತರ ಆಜ್ಞೆಗಳನ್ನು ಮೀರುವಂತೆ ನಡಿಸಿದರೆ, ಆಶಿಸುವದಕ್ಕೂ ಇರುವುದು.

© 2009 Truth for Today